**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No.910 /2023</u>**

**CW-4** **PW: 2**

| | |
|---|---|
| ಸಾಕ್ಷಿಯ ಹೆಸರು | ಃ ಸದ್ದಾಂ ಹುಸೇನ್ ದಿಡ್ಡಿ |
| ತಂದೆ /ಗಂಡನ ಹೆಸರು | ಃ ಮಕ್ತುಂ ಹುಸೇನ್ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಪೊಲೀಸ್ ಪೇದೆ ಎಪಿಎಂಸಿ ಪೋಲಿಸ ಠಾಣೆ, |
| ವಾಸಸ್ಥಳ | ಃ ನವನಗರ. ಹುಬ್ಬಳ್ಳಿ. |

**ದಿಃ 02.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ದಿನಾಂಕ 28.03.2023 ರಂದು ಬೆಳಗ್ಗೆ 9 ಗಂಟೆಯಿಂದ ನಾನು, ಚಾಸಾ-1, 5 ರಿಂದ 7 ರವರು ಗಸ್ತು ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರಿಗೆ ಅವರುಗೋಳ ರೈಲ್ವೆ ಬ್ರಿಡ್ಜ ಬಳಿ ರಾಯಲ್ ರಿಡ್ಜ ಹೋಟೆಲ್ ಹತ್ತಿರ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದಾದರೆ ಎಂದು ಮಾಹಿತಿ ಬಂದ ಮೇರೆಗೆ ಚಸಾ-1 ರವರು ತನಿಖಧಿಕಾರಿಯ ಬಳಿ ಫಿರ್ಯಾದನ್ನು ನೀಡಿರುತಾತ್ರೆ ನಂತರ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಚಾಸಾ-10 ರವರು ನಮ್ಮ ಜೊತೆ ಸ್ಥಳಕ್ಕೆ ಠಾಣೆಯಿಂದ 3.10 ಕ್ಕೆ ತೆರಳಿ 3.20 ರ ಸಮಯಕ್ಕೆ ಬಂದು 50 ಮೀ ದೂರದಿಂದ ವಾಹವನ್ನು ನಿಲ್ಲಿಸಿ ಆರೋಪಿತರನ್ನು ವೀಕ್ಷಿಸಿದಾಗ ಒಬ್ಬರ ಬಳಿ ಬಿಳಿ ಪ್ಲಾಸ್ಟಿಕ್ ಚೀಲದಿದದುಿಎ ಯಾವುಂದೇ ವಸ್ತುವನ್ನು ತೆಗೆದು ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದ ಮೇರೆಗೆ ನಾವು ಅವರನ್ನು ಸುತ್ತು ವರಿದು ಹಿಡಿಯಲಾಗಿ ಇಬ್ಬರು ಗ್ರಾಹಕರು ಸ್ಥಳದಿಂದ ಓಡಿ ಹೋಗಿದ್ದು ಆರೋಪಿತರಿಬ್ಬರನ್ನು ಹಿಡಿದುಕೊಂಡೆವು. ಆರೋಪಿತರಲ್ಲಿ ಒಬ್ಬರು ತನ್ನ ಹೆಸರು ಹೆಸರು ಬಸವರಾಜು ವಯಸು 32 ವರ್ಷ ಇನ್ನೊಬ್ಬನ ಹೆಸರು ಚರಂತಯ್ಯ ಕಳಸಣ್ಣವರ್ ವಯಸ್ಸು 43 ಎಂದು ತಿಳಿಸಿರುತ್ತಾರೆ. ಸದರಿ ಇಬ್ಬರು ಅಮರಗೋಳ ವಾಸಿಗಳು ಇದ್ದು ಅವರ ಬಳಿ ಚಾಸಾ-10 ರವರು ವಿಚಾರಿಸಿದಾಗ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ.

ಆರೋಪಿತರಿಬ್ಬರುನ್ನು ತಪಾಸಣೆಯನ್ನು ಮಾಡಿದಾಗ ಅವರ ಬಳಿ ಓರಿಜನಲ್ಸ ಚಾಯ್ಸ ವಿಸ್ಕಿಯ 90 ಎಂ ಎಲ್ ನ 59 ಟೆಟ್ರಾಪ್ಯಾಕೇಟಗಳು ಬಸವರಾಜ ಅವರ ವಶದಲ್ಲಿ ಇದ್ದು ಅದನ್ನು ಚಾಸಾ-10 ರವರು

ಪಂಚರ ಸಮಕ್ಷಮ ಜಪ್ತುಪಡಿಸಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಚಾಸಾ-10 ರವರು ಒಂದು ಛಾಯ ಚಿತ್ರವನ್ನು ತೆಗೆಯುವಂತೆ ಮೌಖಿಕ ಆದೇಶ ನೀಡಿದ್ದು ನಾನು ಮೂರು ಛಾಯ ಚಿತ್ರಗಣನ್ನು ತೆಗೆದಿರುತ್ತೇನೆ. ಪಂಚನಾಮೆಯನ್ನು ಮದ್ಯಾಹ್ನ 3.30 ರಿಂದ 5 ಗಂಟೆಯವರೆಗೆ ಬರೆಯಲಾಗಿತ್ತು. ನಾನು ಛಾಯ ಚಿತ್ರವನ್ನು ಪ್ರಿಂಟ್ ಹಾಕಿ ಕೊಟ್ಟ ಬಗ್ಗೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯ ದ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಪ್ರಮಾಣ ಪತ್ರವನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಿರುತ್ತಾರೆ. ಸಾಕ್ಷಿಯ ನಿಪಿ-1 ರ ಸಮಯದಲ್ಲಿ ತೆಗೆದ ಛಾಯ ಚಿತ್ರಗಳಾದ ನಿಪಿ-2 ಮತ್ತು 3 ನ್ನು ನೋಡಿ ಗುರುತಿಸಿರುತ್ತಾರೆ. ಇನ್ನೊಂದು ಛಾಯ ಚಿತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-1 ರ ಸಮಯದಲ್ಲಿ 59 ಟೆಟ್ರಾಪ್ಯಾಕೇಟಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿರ ಪರ ವಕೀಲರು ವಿನಾಯಿತಿ ಆರ್ಜಿಯನ್ನು ಅಲ್ಲಿಸಿದ್ದು 1 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾ್ರರೆ.

**(ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀಮತಿ ಶರ್ಮಿಳ ಕಾಮತ್ ಕೆ)**
**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**